ಶ್ರೀ ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಲಾಲಾಜಿ ಆರ್. ಮೆಂಡನ್‌ರವರು ಪ್ರಶ್ನೆಯನ್ನು ಕೇಳಿ, ಅವರ ಭಾಗದಲ್ಲಿರುವ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇದೆ ಎಂದು ತಿಳಿಸಿದರು. ಅಲ್ಲಿ ಐದು ಮಂದಿ ವೈದ್ಯರು ಕೆಲಸ ಮಾಡಬೇಕಾಗಿತ್ತು, ಆದರೆ ಅಲ್ಲಿ ಇಬ್ಬರು ವೈದ್ಯರು ಕೆಲಸ ಮಾಡುತ್ತಿದ್ದಾರೆಂದು ಹೇಳಿದರು. ಒಟ್ಟು ಆಸ್ಪತ್ರೆಯಲ್ಲಿ 16 ವೈದ್ಯರ vacant post ಇದೆ, 32 work post ಇದೆ, ಒಟ್ಟು sanction post 48 ಇದೆ. ನಾವು ಆದಷ್ಟು ಬೇಗ 815 ಮಂದಿ ವೈದ್ಯರನ್ನು ತೆಗೆದುಕೊಳ್ಳಬೇಕೆಂದು ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಆ ಪ್ರಸ್ತಾವನೆ ಬಂದ ನಂತರ ಉಡುಪಿ ಜಿಲ್ಲೆಗೆ ಹೋದಂತಹ ಸಂದರ್ಭದಲ್ಲಿ ನಿಮ್ಮ ಭಾಗದಲ್ಲಿ ಯಾವರೀತಿಯಾಗಿ ವೈದ್ಯಕೀಯ ಕೊರತೆ ಇದೆ, ಆ ಕೊರತೆಯನ್ನು ಆದಷ್ಟು ಬೇಗ ಮಾಡಿಕೊಡುತ್ತೇನೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಅಧ್ಯಕ್ಷರು : ತಾವು ಅಲ್ಲಿಗೆ ಒಂದು ಬಾರಿ visit ಮಾಡಿ.

ಶ್ರೀ ಶ್ರೀರಾಮುಲು : ಖಂಡಿತವಾಗಿ, ನಾನು ಉಡುಪಿ ಜಿಲ್ಲೆಗೆ ಬಂದಾಗ ಅಲ್ಲಿಗೆ ಭೇಟಿ ಮಾಡುತ್ತೇನೆ.

(218) ಶ್ರೀ ಜಯಚಂದ್ರ ಟಿ. ಬಿ. (ಪಿರಾ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಶಿರಾ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಘಟಕ ಹಾಗೂ ತಾಲ್ಲೂಕು ಆಸ್ಪತ್ರೆಗಳ ಸಂಖ್ಯೆ ಎಷ್ಟು ;

ಆ) ಅವುಗಳಲ್ಲಿ ವಿವಿಧ ಹಂತದ ಹುದ್ದೆಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ;

ಇ) ಯಾವ ಯಾವ ಆಸ್ಪತ್ರೆಗಳಿಗೆ ಶಾಶ್ವತ ಕಟ್ಟಡಗಳು ಇವೆ ; ಕೆ.ಹೆಚ್.ಎಸ್.ಡಿ.ಪಿ. ಅನುದಾನದಲ್ಲಿ ಕೈಗೊಂಡಿರುವ ಕಟ್ಟಡಗಳು ಯಾವುವು ; ಎಷ್ಟು ಅನುದಾನವನ್ನು ನೀಡಲಾಗುವುದು ;

ಈ) ಶಿರಾ ತಾಲ್ಲೂಕು, ಚಿರತಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡವು ಅಪೂರ್ಣ ವ್ಯವಸ್ಥೆಯಲ್ಲಿದ್ದು ಇದಕ್ಕೆ ಅಗತ್ಯ ಅನುದಾನವನ್ನು ನೀಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೆ ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಶಿರಾ ತಾಲ್ಲೂಕಿನಲ್ಲಿ ಒಂದು ತಾಲ್ಲೂಕು ಆಸ್ಪತ್ರೆ ಹಾಗೂ 12 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಪ್ರಾಥಮಿಕ ಆರೋಗ್ಯ ಘಟಕಗಳು ಇರುವುದಿಲ್ಲ. ನಾಲ್ಕು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಈಗಾಗಲೇ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಬಂದಿದೆ. ಇಲಾಖೆಯಲ್ಲಿ ಖಾಲಿಯಿರುವ 815 ವೈದ್ಯರ ಹುದ್ದೆಗಳನ್ನು 2008ನೇ ಸಾಲಿನಲ್ಲಿ ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇಲಾಖೆಯಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಸಿಬ್ಬಂದಿಯನ್ನು ಭರ್ತಿ ಮಾಡುವ ಸಲುವಾಗಿ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ ಪ್ರಸಕ್ತ ಸಾಲಿನಲ್ಲಿ 3228 ಹುದ್ದೆಗಳು ಹಾಗೂ 1000 ಹುದ್ದೆಗಳನ್ನು ಒಟ್ಟು 4228 ಹುದ್ದೆಗಳನ್ನು ತುಂಬಲು ಮತ್ತು ಮುಂದಿನ ವರ್ಷ 1017 ಹುದ್ದೆಗಳನ್ನು ತುಂಬಲು ಅನುಮತಿ ನೀಡಿದೆ. ಈ ಬಗ್ಗೆ ವಿಶೇಷ ನಿಯಮಗಳನ್ನು ರೂಪಿಸಿ ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

ಇ) ಶಾಶ್ವತ ಕಟ್ಟಡಗಳ ಬಗ್ಗೆ ಪಟ್ಟಿ ಲಗತ್ತಿಸಿದೆ.

ಕೆ.ಹೆಚ್.ಎಸ್.ಡಿ.ಆರ್.ಪಿ. ಅನುದಾನದಲ್ಲಿ ಕೈಗೊಂಡಿರುವ ಕಟ್ಟಡಗಳ ವಿವರ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಪ್ರಾ.ಆ.ಕೇಂದ್ರದ ವಿವರ	ಅಂದಾಜು ಮೊತ್ತ	ಖರ್ಚಾದ ಮೊತ್ತ
1	ಪ್ರಾ.ಆ. ಕೇಂದ್ರ, ತರೂರು	ರೂ. 139.25	–
2	ಶಿರಾ ತಾಲ್ಲೂಕು ಮಟ್ಟದ ಆಸ್ಪತ್ರೆ	ರೂ. 206.68	32.99

ಈ ಶಿರಾ ತಾಲ್ಲೂಕು, ಚಿರತಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಕಾಮಗಾರಿಯನ್ನು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯಡಿಯಲ್ಲಿ ಪ್ರಸ್ತಾವನೆ ಕೈಗೆತ್ತಿಕೊಳ್ಳಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಶಿರಾ ತಾಲ್ಲೂಕಿನ ಆಸ್ಪತ್ರೆಯಲ್ಲಿ ಮಂಜೂರಾಗಿರುವಂತಹ ಹುದ್ದೆಗಳು ಎಷ್ಟು ? ಖಾಲಿ ಇರುವ ಹುದ್ದೆಗಳು ಎಷ್ಟು ? ಅದಲ್ಲದೆ ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ಭರ್ತಿ ಮಾಡುವುದಕ್ಕೆ ಏನೆಲ್ಲಾ ಕಾರ್ಯಕ್ರಮಗಳನ್ನು ಹಾಕಿದ್ದೇವೆಂದು ಹೇಳುವಾಗ, ಅನುಮತಿಯನ್ನು ನೀಡಿದೆ, ವಿಶೇಷ ನಿಯಮಗಳನ್ನು ರೂಪಿಸಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ ಎನ್ನುವಂತಹ ಮಾತನ್ನು ಹೇಳುತ್ತೀರಿ. ಇದು ಜಾರಿಯಲ್ಲಿದೆ, ನಾವು ತೆಗೆದುಕೊಳ್ಳುತ್ತೇನೆ, ಮಾಡುತ್ತೇವೆ, ಹಣಕಾಸಿನ ಇಲಾಖೆಗೆ ಪ್ರಸ್ತಾವನೆ ಕಳುಹಿಸಿದ್ದೇನೆ ಎಂದು ಹೇಳುವುದನ್ನು ಬಿಟ್ಟು, ದಯಮಾಡಿ ಅವರನ್ನೆಲ್ಲಾ ನೀವು ಯಾವಾಗ appoint ಮಾಡಿ ಕಳುಹಿಸಿಕೊಡುತ್ತೀರಿ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಈಗತಾನೆ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ವೈದ್ಯರ ಕೊರತೆ ಇದೆಯೆಂದು ಪ್ರಸ್ತಾವನೆಯನ್ನು ನಮ್ಮ ಅಧಿಕಾರಿಗಳು ತಂದಂತಹ ಸಂದರ್ಭದಲ್ಲಿ ತಕ್ಷಣ paramedical staff ಸುಮಾರು 3,228 ಹಾಗೂ 1000 ಹುದ್ದೆಗಳನ್ನು ಆದಷ್ಟು ಬೇಗ ತುಂಬಬೇಕೆಂದು ಹೇಳಿ, ವೈದ್ಯರು ಸೇರಿದಂತೆ ಒಟ್ಟು 5,024 ಹುದ್ದೆಗಳು ಇದ್ದು, ರಾಜ್ಯದ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಏನಿದೆ, ಆ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸರಿಪಡಿಸಬೇಕಾದರೆ ಅದಕ್ಕೆ ಕಾಯಕಲ್ಪ ಮಾಡಬೇಕಾಗಿದೆ. ಬಹಳಷ್ಟು ಕಡೆ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇದ್ದು, ಒಂದೂವರೆ ತಿಂಗಳೊಳಗಾಗಿ ತಕ್ಷಣ 4,228 paramedical staff ಹಾಗೂ 815 ಮಂದಿ ವೈದ್ಯರನ್ನು ತಕ್ಷಣವೇ ತೆಗೆದುಕೊಳ್ಳಬೇಕೆಂದು cabinet ನಲ್ಲಿ finalize ಆಗಿದೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ತಾಲ್ಲೂಕಿನಲ್ಲಿ ಎಷ್ಟು ಹುದ್ದೆಗಳು ಇವೆ ? ಎಷ್ಟು ಹುದ್ದೆಗಳು ಖಾಲಿ ಇವೆಯೆಂದು ಕೇಳಿದ್ದೆ. ನಮಗೆ ಸುಮಾರು 100 ಹುದ್ದೆ ಗಳಿಗಿಂತಲೂ ಹೆಚ್ಚಿಗೆ ಮಂಜೂರಾಗುವಂಥಾದ್ದು, ಅದರಲ್ಲಿ ಕೇವಲ 28 ಹುದ್ದೆಗಳು ಮಾತ್ರ ಭರ್ತಿಯಾಗಿರುವಂಥಾದ್ದು, ಇನ್ನು 72 ಹುದ್ದೆಗಳು ಖಾಲಿ ಇವೆ. ಯಾವ ರೀತಿ ಆದರೆ ತಾಲ್ಲೂಕು ಆಸ್ಪತ್ರೆಗಳು ಹೇಗೆ run ಆಗಬೇಕೆಂಬುದನ್ನು ಮಾನ್ಯ ಸಚಿವರು ಯೋಚನೆ ಮಾಡಬೇಕು. ನಾವು ಈ ಬಗ್ಗೆ ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ, ಏನಾದರೂ ಮಾಡಿ senior doctor ಗಳನ್ನು posting ಮಾಡಬೇಕಾಗಿದೆ.

ಅಧ್ಯಕ್ಷರು : ಮಾನ್ಯ ಜಯಚಂದ್ರರವರೆ, ಇವತ್ತು cabinet ನಲ್ಲಿ ಹುದ್ದೆಗಳನ್ನು

ಭರ್ತಿ ಮಾಡುವ ವಿಚಾರವಾಗಿ decision ಆಗಿದೆ. ಇನ್ನು ಮುಂದೆ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಆಗಿದೆ, ಎಲ್ಲಾ ಕಡೆಗಳಲ್ಲು allot ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಅದು ಆದಷ್ಟು ಬೇಗ ಆಗಬೇಕು. ಈಗ veterinary doctor ಇಲ್ಲ.

ಅಧ್ಯಕ್ಷರು : ತಾವು ಹೇಳುವಂಥಾದ್ದು ಸರಿ ಇದೆ. ಅದನ್ನು ಒಪ್ಪುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನಾನು ಎರಡು ತಿಂಗಳುಗಳಿಂದ posting ಮಾಡಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ, ಅದು ಸಾಧ್ಯವಾಗಿಲ್ಲ.

ಅಧ್ಯಕ್ಷರು : ಆ ಬಗ್ಗೆ ಇವತ್ತು ನಿರ್ಣಯವಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಇದು ಇವತ್ತಿನ ಸಮಸ್ಯೆಯಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಅದು ನಿಜ, ನಾನು ಮಾನ್ಯ ಬಚ್ಚೇಗೌಡರು ಬಂದ ಮೇಲೆ ಸಮಸ್ಯೆ ಉದ್ಭವವಾಯಿತೆನ್ನುವಂಥಾ ಮಾತನ್ನು ಹೇಳಲಿಲ್ಲ, ಇದು ನಿರಂತರವಾಗಿರುವಂಥಾದ್ದು, ನಾನು ಈಗ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸಬೇಕಾಗುತ್ತದೆ, ಏಕೆಂದರೆ ಆರೋಗ್ಯ ಖಾತೆಗೆ ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ. ದಯಮಾಡಿ ಹುದ್ದೆಗಳನ್ನು ಭರ್ತಿ ಮಾಡುವಂಥಾ ಕೆಲಸವನ್ನು ಮಾಡಿ, ಇನ್ನೊಂದು ಉಪ ಪ್ರಶ್ನೆ ಏನೆಂದರೆ KHSDRPಯಲ್ಲಿ ಕೆಲವು ಆಸ್ಪತ್ರೆಗಳನ್ನು ತೆಗೆದುಕೊಳ್ಳುವಂಥ ಯೋಜನೆಯನ್ನು ಮಾಡಿದ್ದೇವೆಂಬ ಮಾತನ್ನು ಹೇಳಿದ್ದೀರಿ, ಬಹಳ ಸಂತೋಷ, ಆದರೆ ನನಗೆ ಈ ಬಗ್ಗೆ ಒಂದು ಮಾಹಿತಿ ಬೇಕು. ಇಲ್ಲಿಯವರೆಗೆ KHSDRP ಯೋಜನೆ ಪ್ರಾರಂಭವಾಗಿ ಎಷ್ಟು ದಿವಸಗಳಾಯಿತು ? ಇಲ್ಲಿಯವರೆಗೆ ಎಷ್ಟು ಆಸ್ಪತ್ರೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿದೆ ? ಎಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗಿದೆ? ಎನ್ನುವುದಕ್ಕೆ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ತಿಳಿಸಬೇಕು. ಇನ್ನು ಗುಣಮಟ್ಟದ ಬಗ್ಗೆ ಒಂದು ವಿಶೇಷವಾದಂಥ ಗಮನವಿರಬೇಕೆಂಬುದು ಒಂದು ಸಲಹೆ, ಏಕೆಂದರೆ ಈಗಾಗಲೇ ಕಾಮಗಾರಿಗಳು ನಡೆಯುತ್ತಿರುವಂಥಾದ್ದನ್ನು ನಾನೇ ಖುದ್ದಾಗಿ ಪರಿಶೀಲನೆ ಮಾಡಿ ನೋಡಿದ್ದೇನೆ. ಇಲ್ಲಿ ಗುಣಮಟ್ಟವನ್ನು ಕಾಪಾಡುವುದರಲ್ಲಿ KHSDRPಯವರು ಬಹಳ ಹಿಂದೆ ಇದ್ದಾರೆಂಬ ಬಗ್ಗೆ ನೇರವಾಗಿ ಆರೋಪ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ದಯಮಾಡಿ ಸವಿಸ್ತಾರವಾಗಿ ಆ ಯೋಜನೆ ಏನಾಗಿದೆ ? ಯಾವಾಗ ಕೊನೆಗೊಳ್ಳುತ್ತದೆ ? ಎಷ್ಟು ಆಸ್ಪತ್ರೆಗಳು ಆಗಿವೆ ? ಇನ್ನು ಎಷ್ಟು ಆಸ್ಪತ್ರೆಗಳನ್ನು ಮಾಡುವುದಕ್ಕೆ

ಸಾಧ್ಯವೆಂಬ ಮಾಹಿತಿಯನ್ನು ಸಭೆಗೆ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ತಾವು entire stateಗೆ ಸಂಬಂಧಪಟ್ಟ ಮಾಹಿತಿಯನ್ನು ಕೇಳಿದರೆ, ತಕ್ಷಣ ಎಲ್ಲಾ ಮಾಹಿತಿ ಎಲ್ಲಿ ಇರುತ್ತದೆ ?

ಶ್ರೀ ಟಿ. ಬಿ. ಜಯಚಂದ್ರ : ಇರುತ್ತದೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಆದಷ್ಟು ಬೇಗ ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ಒದಗಿಸಿ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈ subject ಅನ್ನು cabinetಗೆ ತೆಗೆದುಕೊಂಡು ಹೋಗುವ ಮುನ್ನವೇ ಇಷ್ಟು vacancyಗಳು ಇವೆಯೆಂದು ಅದಕ್ಕೆ approvalಗೋಸ್ಕರ ಅದನ್ನು ತೆಗೆದುಕೊಂಡು ಹೋಗುತ್ತಾರೆ. ಅದಕ್ಕೆ ಇಷ್ಟು ಹಣವಾಗುತ್ತದೆ, ಇದರ ಬಗ್ಗೆ finance concurrence ಅನ್ನೆ ನೀವು cabinetಗೆ ತೆಗೆದುಕೊಂಡು ಹೋಗುತ್ತೀರಿ.

ಅಧ್ಯಕ್ಷರು : ಈಗ ಮಾನ್ಯ ಸದಸ್ಯರು KHSDRPಗೆ ಸಂಬಂಧಪಟ್ಟ ಕಟ್ಟಡಗಳ ಕೇಳಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ನನ್ನ ಅಭಿಪ್ರಾಯವೇನೆಂದರೆ ಅವರು Public Service Commissionಗೆ ಹೋಗಿ recruitment ಆಗುವುದು late ಆಗಬಹುದು. ನಾನು ಏನು ಹೇಳುತ್ತೇನೆಂದರೆ, ಹಿಂದೆ vacancyಗಳನ್ನು immediately fill up ಮಾಡುವುದಕ್ಕೋಸ್ಕರ Deputy Commissionerಗೆ powerನ್ನು ನೇರವಾಗಿ ಕೊಟ್ಟಿದ್ದರು, ಅಂದರೆ ಅನೇಕ ಜನರು ತೊಂದರೆಗೆ ಒಳಗಾಗಿದ್ದಾರೆಂದು ಕೊಟ್ಟಿದ್ದರು. Atleast ಈಗಲೂ ಕೂಡ Deputy Commissioner ಮುಖಾಂತರ immediate ಆಗಿ fill up ಆಗುವಂತೆ ಮಾಡಿ. Then regular recruitment Public Service Commissionನಿಂದ ಯಾವಾಗ ಮಾಡುತ್ತಿರೋ ಮಾಡಿ, ಇಲ್ಲವೆಂದರೆ ಏನಾಗುತ್ತದೆಂದರೆ ನಿಮ್ಮ process complete ಆಗುವುದಕ್ಕೆ 6 months ಆಗುತ್ತದೆ. ಆಗ ಪುನಃ ಎಲ್ಲರಿಗೂ ತೊಂದರೆಯಾಗುತ್ತದೆ. ಅದಕ್ಕೆ ದಯವಿಟ್ಟು ಅದರ ಬಗ್ಗೆ ಗಮನ ಹರಿಸಬೇಕು.

ಅಧ್ಯಕ್ಷರು : ಮಾನ್ಯ ಶ್ರೀರಾಮುಲುರವರೆ, ಇದು ತುಂಬಾ ಒಳ್ಳೆಯ ಸಲಹೆ ಇದೆ. ಹಿಂದೆ ಆ ರೀತಿಯಲ್ಲಿ Deputy Commissionerರವರಿಗೆ ಅಧಿಕಾರವನ್ನು ಕೊಟ್ಟಿದ್ದರು, ಅಂದರೆ contract basis ಮೇಲೆ ತಕ್ಷಣ ತೆಗೆದುಕೊಂಡು, ಆಮೇಲೆ immediate ಆಗಿ ಅವರ service ಮೇಲೆ ಕೊಡುತ್ತಿದ್ದರು, ಆ ಬಗ್ಗೆಯೂ ವಿಚಾರ ಮಾಡಿ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಎಲ್ಲೆಲ್ಲಿ ಕೊರತೆ ಇದೆಯೆಂಬ ಬಗ್ಗೆ ಪಟ್ಟಿಯನ್ನು ಕಳುಹಿಸಿಕೊಡುವಂತೆ ತಿಳಿಸಿ, ತಕ್ಷಣ ಅವರಿಗೆ ಏನೇನು ಕೊರತೆ ಇದೆಯೆಂಬುದನ್ನು ನೋಡಿ, ಆದಷ್ಟು ಬೇಗನೆ ನಾನು ಮಾಡಿ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಜಯಚಂದ್ರರವರು KHSDRP ಯ ಆಸ್ಪತ್ರೆ ಕಟ್ಟಡಗಳ ಬಗ್ಗೆ ಪ್ರಶ್ನೆಯನ್ನು ಕೇಳಿದರು. ನಿಮ್ಮ ಬಳಿ ಮಾಹಿತಿ ಇದ್ದರೆ ಕೊಡಿ, ಇಲ್ಲದಿದ್ದರೆ ಅವರಿಗೆ ಮಾಹಿತಿಯನ್ನು ಒದಗಿಸಿ ಕೊಡಿ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಆದಷ್ಟು ಬೇಗ ಒದಗಿಸಿ ಕೊಡುತ್ತೇನೆ.

ಮತೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗಳು

(217) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) :– ಮಾನ್ಯ ಹಜ್, ವಕ್ಫ್, ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮತೀಯ ಅಲ್ಪಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಯಾವುವು ;

ಆ) ಈ ಯೋಜನೆಗಳ ಫಲಾನುಭವಿಗಳಿಗೆ ನಿಗದಿಪಡಿಸಲಾಗಿರುವ ಅರ್ಹತೆಗಳು ಯಾವುವು ; ಅವುಗಳನ್ನು ಸರಳಗೊಳಿಸಿ ಅರ್ಹರು ಬಹುಸಂಖ್ಯೆಯಲ್ಲಿ ಪಡೆಯಲು ಅನುಕೂಲವಾಗುವಂತೆ ಮಾಡಲು ಸರ್ಕಾರದ ಸಕಾಲಿಕ ಕ್ರಮಗಳೇನು ;

ಇ) ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಎಷ್ಟು ಜನರಿಗೆ ಈ ಯೋಜನೆಯ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ ?

ಪ್ರೊ. ಡಾ॥ ,ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):–

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಮತೀಯ ಅಲ್ಪಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡಿದೆ :–

1. ಸ್ವಾವಲಂಬನ ಸಾಲದ ಯೋಜನೆ.
2. ಸಹಾಯಧನ ಯೋಜನೆ.
3. ಅರಿವು (ವಿದ್ಯಾಭ್ಯಾಸ) ಸಾಲ ಯೋಜನೆ.
4. ಗಂಗಾ ಕಲ್ಯಾಣ ಯೋಜನೆ.